# ಕನ್ನಡ ನಮ್ಮುಸಿರು

ಕನ್ನಡ ನಾಡಿನ ಮುದ್ದಿನ ಕಂದ
ತಾಯ್ನುಡಿ ಕನ್ನಡ ಮರೆಯದಿರು.
ಒಂದು ನವೆಂಬರ್ ರಾಜ್ಯೋತ್ಸವ ದಿನ
ಬಾರಿಸು ಕನ್ನಡದಾ ಡಮರು.

ಕನಸನು ಕಾಣುವ
ಹೊಸತನು ಪಡೆಯುವ
ಒಳಗಿನ ಭಾಷೆ ಕನ್ನಡವು.
ಬಾಳನು ಬದುಕುವ
ಬೆಳಸನು ಕೊಯ್ಯುವ
ಭಾಷೆಯೆ ನಮಗೆ ಕನ್ನಡವು.

ಕನ್ನಡವೆಂದರೆ ಹಾಲು ಜೇನು
ಹರಿಯಿತು ಬೆಳದಿಂಗಳ ಹೊನಲು.
ಕನ್ನಡ ಅಕ್ಷರ ಎಂಥ ಸುಂದರ !
ಕೋದಿಹ ಮುತ್ತಿನ ಹಾರದೊಳು.

ಕನ್ನಡ ಸಂಸ್ಕೃತಿ ನಮ್ಮಯ ಸುಕೃತಿ
ಭಾವೈಕ್ಯತೆಗೆ ಇದು ಹೆಸರು.
ಸೋದರ ಭಾಷೆಗಳೊಂದಿಗೆ ನೇಹ
ಕನ್ನಡವೇ ನಮ್ಮೆಲ್ಲರ ಉಸಿರು.

ನಲಿದೊಂದಾಗಿ ಬೆಸೆದೊಗ್ಗೂಡಿ
ಬಾಳುವರಿಲ್ಲಿ ನಾಡವರು.
ಜೇನ್ನೊಣದಂತೆ ಒಗ್ಗಟ್ಟಾಗಿ
ಜೇನು ತಯಾರಿಸಿ ಹಂಚುವರು.

ಕನ್ನಡ ಸತ್ಯ ಕನ್ನಡ ನಿತ್ಯ
ಕನ್ನಡವೇ ನಮಗೆ ಬೆಳಕು.
ನಾಡಿನ ಗಿರಿನದಿ ಸಿರಿನುಡಿ ಕಲೆಗುಡಿ
ಸುಂದರ ಪರಿಸರ ಝುಲಕು.

**-ವನರಾಗ ಶರ್ಮಾ**





# ಮುಕ್ತಿ

ಒಬ್ಬ ಬೌದ್ಧ ಸನ್ಯಾಸಿ ಊರಿನ ಯಜಮಾನನ ಜೊತೆ ಬೀದಿಯಲ್ಲಿ ಹೋಗುತ್ತಿರುವಾಗ ಕೆಲವು ಮಕ್ಕಳು ಚಿಟ್ಟೆಗಳನ್ನು ಹೊಡೆಯುವುದನ್ನು ಕಂಡ ಯಜಮಾನ ಅವರನ್ನು ಅಲ್ಲಿಂದ ಗದರಿಸಿ ಕಳಿಸಿದ. ಆಗ ಪೆಟ್ಟು ತಿಂದ ಚಿಟ್ಟೆ ಕಂಡ ಬೌದ್ಧ ಸನ್ಯಾಸಿ ಅದನ್ನು ಎತ್ತಿಕೊಂಡು ಒಂದು ಬಂಡೆಯ ಮೇಲೆ ಇಟ್ಟು ಅಲ್ಲಿಯೇ ಪಕ್ಕದಲ್ಲಿರುವ ನೆಲವನ್ನು ಸ್ವಲ್ಪ ಅಗೆದು ಚಿಟ್ಟೆಯನ್ನು ಅದರಲ್ಲಿ ಹಾಕಿ ಅದರ ಮೇಲೆ ಮಣ್ಣು ಸುರಿದ.

ಇದನ್ನೆಲ್ಲ ಕಂಡ ಯಜಮಾನ 'ತಾವು ಮಾಡಿರುವುದು ತಪ್ಪಲ್ಲವೇ?' ಎಂಬ ಪ್ರಶ್ನೆ ಮುಂದಿಟ್ಟ.

ಬೌದ್ಧ ಸನ್ಯಾಸಿಯು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾ 'ಈ ಚಿಟ್ಟೆಗೆ ಗುಣಪಡಿಸಲಾರದಷ್ಟು ಗಾಯವಾಗಿತ್ತು. ಜೊತೆಗೆ ಅದರ ಸಾವು ಕೂಡಾ ಖಚಿತವಾಗಿತ್ತು. ಅದನ್ನು ನನ್ನಿಂದ, ನಿನ್ನಿಂದ ಯಾಕೆ? ಆ ಪರಮಾತ್ಮನಿಂದಲೂ ಉಳಿಸಲು ಸಾಧ್ಯವಾಗದ ಮಾತು. ಒಂದು ವೇಳೆ ಹಾಗೆ ಮಾಡದಿದ್ದರೆ ಇರುವೆಗಳು, ಹುಳು, ಹುಪ್ಪಡಿಗಳು ಇದನ್ನು ಜೀವಂತ ಇರುವಾಗಲೇ ಹರಿದು ಹರಿದು ತಿನ್ನುವಾಗ ಚಿಟ್ಟೆ ಅನುಭವಿಸುವ ಚಿತ್ರ ಹಿಂಸೆಯನ್ನು ನೋಡಲಾರದೇ ನಾನು ಚಿಟ್ಟೆಯನ್ನು ಮಣ್ಣಲ್ಲಿ ಮಣ್ಣಾಗಿಸಿ ಕ್ಷಣ ಮಾತ್ರದಲ್ಲಿ ಅದರ ಪ್ರಾಣ ಪಕ್ಷಿ ಹಾರಿ ಹೋಗುವಂತೆ ಮಾಡಿದೆ' ಎಂದ.

ಸಮಾಧಾನಗೊಳ್ಳದ ಯಜಮಾನನೆಂದ, 'ಆದರೂ ನೀವು ಮಾಡಿದ್ದು ಪಾಪವಲ್ಲವೇ?'

ಆಗ ಸನ್ಯಾಸಿ 'ಅಲ್ಲ, ನಾ ತೋರಿದ್ದು ಮುಕ್ತಿ ಮಾರ್ಗ' ಎಂದು ನಕ್ಕು ಮುಂದೆ ನಡೆದ.

**-ಮಾಲತೇಶ ಶಾಂತಗೌಡ ಪಾಟೀಲ, ಹುಬ್ಬಳ್ಳಿ**